**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ ಉತ್ತರ ಕನ್ನಡ : ಕಾರವಾರ**

**ಸ್ಪೆಷಲ್ ಕೇಸ್ ನಂ. 8/2014**

**ದೋ.ಸಾ. : 18 ಪ್ರಾ.ಸಾ. : 12**

| | |
|---|---|
| ಸಾಕ್ಷಿಯ ಹೆಸರು | : ಎಂ. ಚಂದ್ರಶೇಖರ ನಾಯ್ಕ |
| ತಂದೆಯ ಹೆಸರು | : ವೆಂಕಪ್ಪ |
| ವಯಸ್ಸು | : 73 ವರ್ಷ |
| ಉದ್ಯೋಗ | : ನಿವೃತ್ತ ವ್ಯವಸ್ಥಾಪಕರು , ಸಿಂಡಿಕೇಟ್ ಬ್ಯಾಂಕ್ |
| ವಾಸ | : ಮಂಗಳೂರು |

**ದಿನಾಂಕಃ 17-11-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದ**

1. ನಾನು ಸಿಂಡಿಕೇಟ್ ಬ್ಯಾಂಕ್ ಅಂಕೋಲಾ ಶಾಖೆಯಲ್ಲಿ ನವೆಂಬರ್ 2008 ರಿಂದ ಜುಲೈ 2010 ರವರೆಗೆ ಹಿರಿಯ ವ್ಯವಸ್ಥಾಪಕ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ನಾನು ಅಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಲೋಕಾಯುಕ್ತ ಆರಕ್ಷಕ ಅಧೀಕ್ಷಕರು ನನಗೆ ಪತ್ರ ಬರೆದು ನರೇಂದ್ರ ಹಿತ್ತಲಮಕ್ಕಿರವರಿಗೆ ಸಂಬಂಧಪಟ್ಟ ಬ್ಯಾಂಕಿನ ತಖ್ತೆಃ ನೀಡುವಂತೆ ಕೇಳಿದ್ದರು. ಈಗ ನಾನು ಆ ಪತ್ರದ ನಕಲನ್ನು ನೋಡಿರುತ್ತೇನೆ. ಕಡತದಲ್ಲಿ ನೆರಳಚ್ಚು ಪ್ರತಿ ಮಾತ್ರ ಇದೆ ಆದ್ದರಿಂದ ಅದನ್ನು ನಿಶಾನೆ ಮಾಡಿರುವುದಿಲ್ಲ. ನಾನು ಪರಿಶೀಲನೆ ಮಾಡಿ ಆ ಬಗ್ಗೆ ಪತ್ರದ ಮೂಲಕ ಬಹುಶಃ ನರೇಂದ್ರ ಹಿತ್ತಲಮಕ್ಕಿರವರ ಪತ್ನಿ ಅಥವಾ ಬೇರೆ ಯಾರು ಎಂದು ನನಗೆ ಗೊತ್ತಿಲ್ಲ ಆದರೆ ಕಲಾ ಎನ್. ಹಿತ್ತಲಮಕ್ಕಿರವರ ಖಾತೆಯ ತಖ್ತೆಃಯನ್ನು ದೃಢೀಕರಿಸಿ ಕೊಟ್ಟಿರುತ್ತೇನೆ. ಈಗ ನಾನು ಆ ಬರೆದ ಕವಚ ಪತ್ರವನ್ನು ಮತ್ತು ಅದರೊಂದಿಗೆ ನಾನು ನೀಡಿರುವ ದೃಢೀಕೃತ ಖಾತೆ ತಖ್ತೆಃ ನಕಲನ್ನು ನೋಡಿರುತ್ತೇನೆ. ಸದರಿ ಕವಚ ಪತ್ರವನ್ನು ನಿ.ಪಿ. 151 ಎಂದು ಗುರುತಿಸಲಾಯಿತು. ಸದರಿ ದೃಢೀಕೃತ ಖಾತೆ ತಖ್ತೆಃಯನ್ನು ನಿ.ಪಿ. 152 ಎಂದು ಗುರುತಿಸಲಾಯಿತು. ಅವುಗಳಲ್ಲಿ ನನ್ನ ರುಜು ಇದೆ . ಸಾಕ್ಷಿಯ ರುಜುವನ್ನು ನಿ.ಪಿ. 151(ಎ) ಮತ್ತು 152(ಎ) ಎಂದು ಗುರುತಿಸಲಾಯಿತು. ನಿ.ಪಿ. 152 ರ ಪ್ರಕಾರ ಖಾತೆದಾರರ ಹೆಸರಿನಲ್ಲಿ ರೂ. 62,011.11/-ಅಂತಿಮ ಶಿಲ್ಕು ಇತ್ತು . ಅದನ್ನು ನನ್ನ ಕವಚ ಪತ್ರದಲ್ಲಿ ಹೇಳಿದ್ದೇನೆ. ನಾನು ಆ ಸಂಬಂಧದಲ್ಲಿ ಆಕೆ ಖಾತೆಯ ಮತ್ತೊಂದು ತಖ್ತೆಃ ದೃಢೀಕೃತ ನಕಲನ್ನು

ಮತ್ತೊಂದು ಪತ್ರದೊಂದಿಗೆ ಕಳುಹಿಸಿರುತ್ತೇನೆ. ಈಗ ಅದನ್ನು ನೋಡಿರುತ್ತೇನೆ. ಅವುಗಳನ್ನು ನಿ.ಪಿ. 153 ಮತ್ತು 154 ಎಂದು ಗುರುತಿಸಲಾಯಿತು. ಅವುಗಳಲ್ಲಿ ನನ್ನ ರುಜು ಇವೆ . ಸಾಕ್ಷಿಯ ರುಜುಗಳನ್ನು ನಿ.ಪಿ. 153(ಎ) ಮತ್ತು 154(ಎ) ಎಂದು ಗುರುತಿಸಲಾಯಿತು. ನಾನು ಕಳುಹಿಸಿರುವ ಮತ್ತೊಂದು ಆಕೆಯ ಹೆಸರಿಗಿರುವ ಖಾತೆ ತಖ್ತೆಃ ದೃಢೀಕೃತ ನಕಲನ್ನು ಈಗ ನೋಡಿರುತ್ತೇನೆ. ಅದು ನಿಗದಿತ ಠೇವಣಿಗೆ ಸಂಬಂಧಪಟ್ಟ ಪತ್ರ ಆಗಿದ್ದು ಅದನ್ನು ಗ್ರಾಹಕಳಾದ ಕಲಾ ಎನ್. ಹಿತ್ತಲಮಕ್ಕಿಗೆ ನಾನು ಬರೆದಿದ್ದೇನೆ. ಅದರಲ್ಲಿ ನನ್ನ ರುಜು ಇದೆ . ಅದನ್ನು ನಿ.ಪಿ. 155 ಎಂದು ಗುರುತಿಸಲಾಯಿತು. ಸಾಕ್ಷಿಯ ರುಜುವನ್ನು ನಿ.ಪಿ. 155(ಎ) ಎಂದು ಗುರುತಿಸಲಾಯಿತು. ಈಗ ನೋಡಿದ ದಾಖಲಾತಿ ಆಕೆ ಖಾತೆ ತೆರೆಯಲು ಸಲ್ಲಿಸಿರುವ ಅರ್ಜಿಯ ದೃಢೀಕೃತ ನಕಲು ಆಗಿದೆ . ಅದರಲ್ಲಿ ನನ್ನ ರುಜು ಇದೆ . ಆ ದಾಖಲಾತಿಯನ್ನು ನಿ.ಪಿ. 156 ಎಂದು ಗುರುತಿಸಲಾಯಿತು. ಸಾಕ್ಷಿಯ ರುಜುವನ್ನು ನಿ.ಪಿ. 156(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ವಿ ಎನ್ ಎನ್ ರವರಿಂದ**

2. ಆರೋಪಿಗೆ ಮತ್ತು ಕಲಾ ಎನ್. ಹಿತ್ತಲಮಕ್ಕಿ ಹೆಸರಿಗಿರುವ ಖಾತೆಗೆ ಮತ್ತು ನಿಗದಿತ ಠೇವಣಿಗೆ ಯಾವುದೇ ಸಂಬಂಧ ಇಲ್ಲ ಎಂದರೆ ಗೊತ್ತಿಲ್ಲ. ನಾನು ನನ್ನ ಪತ್ರ ನಿ.ಪಿ. 151 ರಲ್ಲಿ ನರೇಂದ್ರ ಹಿತ್ತಲಮಕ್ಕಿ ಹೆಸರಿನಲ್ಲಿ ಯಾವುದೇ ಖಾತೆ ನಮ್ಮ ಬ್ಯಾಂಕ್ ನಲ್ಲಿ ಇಲ್ಲ ಎಂದು ಹೇಳಿದ್ದೇನೆ ಎಂದರೆ ಹೌದು .

**ಮರು ವಿಚಾರಣೆಃ – ಇಲ್ಲ –**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

(ಡಿ.ಎಸ್. ವಿಜಯಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ